39

# ಸೂಚಕ ಕಾರ್ಯಕ್ಕಾಗಿ ಜನರ ಆಪೇಕ್ಷೆ

# (16:1-4)

ಜನಸಮೂಹವು ಯೇಸುವಿಗೆ ತೋರಿದ ವಿವಿಧ ಪ್ರತಿಕ್ರಿಯೆಯ ವಿಷಯವನ್ನು ಅಧ್ಯಾಯ 16ರಲ್ಲಿ ವಿಸ್ತರಿಸಲಾಗಿದೆ. ಪ್ರಾರಂಭದ ವಚನದಲ್ಲಿ, ಫರಿಸಾಯರು ಮತ್ತು ಸದ್ದುಕಾಯರು ಆತನನ್ನು ಮೆಸ್ಸೀಯನೆಂದು ತಿರಸ್ಕರಿಸಿದರು ಮತ್ತು ಆತನಿಗೆ ಅಗೌರವವನ್ನು ತರಲು ಪ್ರಯತ್ನಿಸಿದರು (16:1-4). ಈ ಉಪಕಥೆಯ ನಂತರ, ಯೇಸು ತನ್ನ ಶಿಷ್ಯರಿಗೆ ಯೆಹೂದ್ಯ ನಾಯಕರ ದುರ್ಬೋಧನೆಯ ಕುರಿತು ಎಚ್ಚರಿಸುತ್ತಾನೆ (16:5-12). ನಂತರ ಆತನು ತನ್ನ ವ್ಯಕ್ತಿತ್ವದ ಕುರಿತಾದ ಪ್ರಶ್ನೆಗಳೊಂದಿಗೆ ತನ್ನ ಶಿಷ್ಯರನ್ನು ಎದುರಿಸಿದನು, ಇದರ ಪರಿಣಾಮವಾಗಿ ಪೇತ್ರನು ಯೇಸುವನ್ನು, "ನೀನು ಕ್ರಿಸ್ತನು, ಜೀವಸ್ವರೂಪನಾದ ದೇವರ ಕುಮಾರನು" ಎಂದು ಅರಿಕೆ ಮಾಡಿದನು (16:13-20).

ಈ ಅರಿಕೆಯನ್ನು ಅನುಸರಿಸಿ ತನ್ನ ಮರಣ, ಹೂಣುವಿಕೆ ಮತ್ತು ಪುನರುತ್ಥಾನವನ್ನು ಮುಂತಿಳಿಸಿದನು. ಈ ವಾರ್ತೆಯನ್ನು ಸ್ವೀಕರಿಸಲು ಮನಸ್ಸಿಲ್ಲದೇ ಪೇತ್ರನು ಅವನನ್ನು ಬದಿಗೆ ಕರೆದು ಗದರಿಸಿದನು; ನಿಜವಾಗಿಯೂ ಆತನು ಕ್ರಿಸ್ತನು ಶ್ರಮೆಯನ್ನು ತಾಳಬೇಕು ಎಂಬ ಸತ್ಯವನ್ನು ಗ್ರಹಿಸಿರಲಿಲ್ಲ (16:21-23). ಈ ಸಂದರ್ಭವನ್ನು ಉಪಯೋಗಿಸಿ, ಯೇಸು ತನ್ನ ಶಿಷ್ಯರಿಗೆ ಶಿಷ್ಯತ್ವದ ಕುರಿತು ಸಂಪೂರ್ಣವಾದ ತಿಳುವಳಿಕೆಯನ್ನು ನೀಡಿದನು, ಅವರು ತಮ್ಮ ಯಜಮಾನನಂತೆ ಶ್ರಮೆತಾಳಬೇಕು ಎಂಬುದನ್ನು ಒಳಗೊಂಡಿರುತ್ತವೆ (16:24-27). ಈ ಸಂಭಾಷಣೆಯ ತನ್ನ ಕೊನೆಯ ಮಾತುಗಳಲ್ಲ, ದೇವರ ರಾಜ್ಯ ಅವರ ಜೀವಿತದ ಸಮಯದಲ್ಲಿ ನಿಜವಾಗಿಯೂ ಬರುತ್ತದೆ ಎಂಬ ಭರವಸೆಯನ್ನು ಕರ್ತನು ನೀಡಿದನು (16:28).

## ಪ್ರಶ್ನೆ (16:1)

**1 ತರುವಾಯ ಫರಿಸಾಯರೂ ಸದ್ದುಕಾಯರೂ ಬಂದು ಆತನನ್ನು ಪರೀಕ್ಷಿಸುವದಕ್ಕಾಗಿ - ನೀನು ಆಕಾಶದಲ್ಲಿ ಒಂದು ಸೂಚಕಕಾರ್ಯವನ್ನು ತೋರಿಸಿಕೊಡಬೇಕೆಂದು ಕೇಳಿದರು.**

ಮತ್ತಾಯ 16:1-4 ಅನೇಕ ಯೆಹೂದ್ಯ ನಾಯಕರು ಯೇಸುವನ್ನು ಮೆಸ್ಸೀಯನೆಂದು ನಿರಾಕರಿಸಿದರು ಎಂಬುದಕ್ಕೆ ಒತ್ತು ನೀಡುತ್ತದೆ. 12:38-42ರಲ್ಲಿ ಇದ್ದಂತೆ ಇದೇ, ಹಿಂದೆ ನಾಯಕರ ಗುಂಪು ಅವನ ಬಳಿಗೆ ಬಂದಾಗ ಸೂಚಕಕಾರ್ಯದ ಬೇಡಿಕೆಯನ್ನಿಟ್ಟಿತ್ತು. ಎರಡು ಸಂದರ್ಭದಲ್ಲಿ ಆತನ ಪ್ರತಿಕ್ರಿಯೆ ಒಂದೇ ಆಗಿತ್ತು: ಅವರು ಪ್ರವಾದಿಯಾದ ಯೋನನ ಸೂಚಕಕಾರ್ಯವನ್ನೇ ಹೊರತು ಬೇರೆ ಯಾವುದನ್ನು ಹೊಂದಿಕೊಳ್ಳುವದಿಲ್ಲ.

**ವಚನ 1.** ಯೇಸು ತನ್ನ ವಯಕ್ತಿಕ ಸೇವೆಯನ್ನು ಪ್ರಾರಂಭಿಸಿದಂದಿನಿಂದ, ಬಾಯಿಮಾತಿನ ಮತ್ತು ದೃಢವಾದ ವಿರೋಧವನ್ನು ಯೆಹೊದ್ಯ ಧಾರ್ಮಿಕ ನಾಯಕರಿಂದ ಎದುರಿಸಿದನು, ಮುಖ್ಯವಾಗಿ **ಫರಿಸಾಯರ** ಗುಂಪಿನಿಂದ ವಿರೋಧವನ್ನು ಎದುರಿಸಿದನು. "ಫರಿಸಾಯರು" ಎಂಬ ಹೆಸರಿನ ಅರ್ಥ "ಪ್ರತ್ಯೇಕಿಸಲ್ಪಟವರು." ಅವರು ತಮ್ಮನ್ನು ಇತರ ಯೆಹೂದ್ಯರಿಂದ ವಾಸ್ತವಿಕವಾಗಿ ಪ್ರತ್ಯೇಕಿಸಿಕೊಂಡದ್ದರಿಂದ ಅದು ಅವರಿಗೆ ಉತ್ತಮವಾಗಿ ಹೊಂದಿಕೆಯಾಗಿತ್ತು. ಅವರು ಆತ್ಮೀಕವಾಗಿ ಶ್ರೇಷ್ಟರು, ಅತಿರೇಕವಾದ ಸಂಪ್ರದಾಯ ಪಾಲಕ

ರಾಗಿದ್ದರು ಮೂಲಭೂತವಾದಿಗಳಾಗಿದ್ದರು ಮತ್ತು ಅವರ ದಿನಗಳಲ್ಲಿ ಸಂಪ್ರದಾಯ-ಬದ್ಧ ಜನರಾಗಿದ್ದರು (3:7ರ ಮೇಲಿನ ವಾಖ್ಯಾನ ನೋಡಿರಿ).

**ಸದ್ದುಕಾಯರ** ಕುರಿತಾಗಿ 3:7ರಲ್ಲಿ ಅಂತೀಮವಾಗಿ ಬರೆಯಲ್ಪಟ್ಟಿದೆ. ಹೊಸ ಒಡಬಂಡಿಕೆಯಲ್ಲಿ ಹೇಳಿರುವದಕ್ಕಿಂತ ಹೊರಗಡೆ ಸದ್ದುಕಾಯರ ವಿಷಯದಲ್ಲಿ ಸ್ವಲ್ಪ ತಿಳಿದಿದೆ. ಅವರು ಸಹ ಯೆಹೂದ್ಯ ಧಾರ್ಮಿಕ ನಾಯಕರ ಗುಂಪಿನಲ್ಲಿ ಇದ್ದವರು. ಅವರು ಶ್ರೀಮಂತರಂತೆ ವರ್ತಿಸುತ್ತಿದ್ದರು, ಶಾಸ್ತ್ರಿಗಳು ಯಾಜಕರು ಎರಡು ಪಂಗಡದಲ್ಲಿ ಕಂಡುಬರುತ್ತಿದ್ದರೂ ಮಹಾಯಾಜಕರು ಮತ್ತು ಅನೇಕ ಪ್ರಧಾನ ಯಾಜಕರು ತಮ್ಮಲ್ಲಿ ಇದ್ದಾರೆಂದು ಜಂಬಕೊಚ್ಚಿಕೊಳ್ಳುತ್ತಿದ್ದರು. ರಬ್ಬೀಯ ಸಂಪ್ರದಾಯಕ್ಕೆ ಅವರು ಹೆಚ್ಚಿನ ಗಮನವನ್ನು ನೀಡುತ್ತಿರಲಿಲ್ಲ ಮತ್ತು ಅವರು ಧಾರ್ಮಿಕ, ಸಾಂಸ್ಕೃತಿಕ, ಮತ್ತು ರಾಜಕೀಯ ಹೊಂದಾಣಿಕೆಯನ್ನು ಮಾಡಿಕೊಳ್ಳಲು, ಹಿಂಜರಿಯುತ್ತಿರಲಿಲ್ಲ. ತಾವು ವೇದವಾಕ್ಯವನ್ನು ನಂಬುತ್ತೇವೆ ಎಂದು ಹೇಳುತ್ತಿದ್ದರು, ಪ್ರಾಥಮಿಕವಾಗಿ ಸೆಪ್ಟುಂಜೆಂಟನ್ನು ಅವರ ಅರ್ಥೈಸುವಿಕೆ ಎಷ್ಟು ಆತ್ಮೀಕವಾಗಿತ್ತೆಂದರೆ ಅವರು ಅದರ ಕ್ರಿಯಾರೂಪದ ಅರ್ಥವನ್ನು ಕಳೆದು ಕೊಳ್ಳುತ್ತಿದ್ದರು. ಈ ಯೆಹೂದ್ಯರು ಅತಿರೇಖವಾಗಿ ಉದಾರ ಮನಸ್ಸಿನವರಾಗಿದ್ದರು ಮತ್ತು ಲೌಕಿಕ ಪಂಗಡದವರಾಗಿದ್ದರು. ಅವರು ದೇವದೂತರನ್ನು, ನಶ್ವರತೆ, ಪುನರುತ್ಥಾನದಲ್ಲಿ ನಂಬಿಕೆಯನ್ನಿಡುತ್ತಿರಲಿಲ್ಲ ಅಥವಾ ಅಲೌಕಿಕವಾದವುಗಳಿಗೆ ಸಂಬಂಧಿಸಿರುವದನ್ನು ನಂಬುತ್ತಿರಲಿಲ್ಲ (ನೋಡಿರಿ 3:7ರ ಮೇಲಿನ ವ್ಯಾಖ್ಯಾನ).

ಫರಿಸಾಯರು ಮತ್ತು ಸದ್ದುಕಾಯರನ್ನು ಒಟ್ಟಾಗಿ ಕಾಣಿಸಿಕೊಳ್ಳುವಾಗ ಅಸಾಮಾನ್ಯ ವಾಗಿತ್ತು, ಯಾಕೆಂದರೆ ಅವರು ಧಾರ್ಮಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ವಿರುದ್ಧ ದಿಕ್ಕಿನಲ್ಲಿ ಎರಡು ಗುಂಪುಗಳ ಮಧ್ಯದಲ್ಲಿ ದೊಡ್ಡ ವಿಭಿನ್ನತೆಯಿದ್ದರೂ, ಯೇಸುವಿನ ಮೇಲಿರುವ ವೈರತ್ವದಲ್ಲಿ ಇಬ್ಬರೂ ಜೊತೆಯಾಗಿದ್ದರು (ನೋಡಿರಿ 22:15-46). ಅವರು ಪರಸ್ಪರರನ್ನು ಅವಮಾನ ಮಾಡುತ್ತಿದ್ದರು, ಆದರೆ ಅವರು ಅದಕ್ಕಿಂತ ಹೆಚ್ಚಾಗಿ ಯೇಸುವನ್ನು ಹಗೆಮಾಡುತ್ತಿದ್ದರು, ಫರಿಸಾಯರು ಯೇಸು ತಮ್ಮ ಸಂಪ್ರದಾಯಗಳಿಗೆ ಸವಾಲನ್ನು ನೀಡುವದನ್ನು ಇಷ್ಟಪಡುತ್ತಿರಲಿಲ್ಲ, ಅದೇ ಸಮಯದಲ್ಲಿ ಸದ್ದುಕಾಯರು ರೋಮನ್ನರ ಆಡಳಿತದ ಪ್ರತಿಫಲವಾಗಿ ಮೆಸ್ಸೀಯನ ಕುರಿತಾದ ಯಾವುದೇ ಕ್ರಾಂತಿಯನ್ನು ವಿರೋಧಿ ಸುತ್ತಿದ್ದರು.

ಯೇಸುವಿನ ಅದ್ಭುತಕಾರ್ಯಗಳಿಂದಾಗಿ ದೇವರನ್ನು ಕೊಂಡಾಡಿದ ಅನ್ಯಮತದವರ ಜನಸಮೂಹಕ್ಕೆ ವ್ಯತಿರಿಕ್ತವಾಗಿ (15:31), ಯೆಹೂದ್ಯ ನಾಯಕರು ಸ್ಪಷ್ಟವಾಗಿ ಆತನಿಗೆ ಅಗೌರವವನ್ನು ತೋರಿಸಲು ಬಂದಿದ್ದರು. **ಪರೀಕ್ಷಿಸು** (*peirazō*) ಎಂಬ ಗ್ರೀಕ್ ಪದವನ್ನು "ಶೋದನೆ" (KJV) ಎಂದು ಅನುವಾದಿಸಲಾಗಿದೆ. ಅದೇ ಪದವನ್ನು ಅರಣ್ಯದಲ್ಲಿ ಸೈತಾನನಂತೆ ಯೇಸು ತಮ್ಮ ಪರೀಕ್ಷೇಯಲ್ಲಿ ವಿಫಲನಾಗುವದನ್ನು ನೋಡಲು ಬಯಸುತ್ತಿದ್ದರು (4:1ರ ಮೇಲಿನ ವ್ಯಾಖ್ಯಾನ ನೋಡಿರಿ). ಈ ಯೆಹೂದ್ಯ ನಾಯಕರು ದೆವ್ವಗಳು ವರ್ತಿಸಿದಂತೆ ವರ್ತಿಸುತ್ತಿದ್ದರು ತಮ್ಮ ಪರೀಕ್ಷೆಯಲ್ಲಿ ಯೇಸುವನ್ನು ಸೋಲಿಸಬೆಕಾಗಿತ್ತು (ನೋಡಿರಿ 19:3; 22:18, 35). Douglas R. A Hare ರವರು, ಅವರು ತಾವು ಯೇಸುವನ್ನು ಪರೀಕ್ಷಿ ಸುತ್ತಿದ್ದೇವೆ ಎಂದು ಭಾವಿಸಿದ್ದರೂ ಸತ್ಯವೇದದ ಪ್ರಮಾಣಕ್ಕೆ ಅನುಸಾರವಾಗಿ (ದರ್ಮೋಪ ದೇಶಕಾಂಡ 13:1-3; 18:15-22), ನೈಜತೆಯಲ್ಲಿ ಅವರು ದೇವರಿಗೆ ಶೋಧನೆಯನ್ನು ತರುತ್ತಿದ್ದರು (ಧರ್ಮೋಪದೇಶಕಾಂಡ 6:16; ಕೀರ್ತನೆ 95:8, 9; ಇಬ್ರಿಯರಿಗೆ 3:7-11). ಯೇಸು ಮೇಲಿಂದ ಮೇಲೆ ಮಾಡಿದ ಅದ್ಭುತಗಳಿಂದ ಈಗಾಗಲೇ ತನ್ನ ವ್ಯಕ್ತಿತ್ವವನ್ನು ಸಿದ್ಧಾಂತಪಡಿಸಿದ್ದನು.[1]

ಯೆಹೂದ್ಯ ನಾಯಕರು ಆತನಿಗೆ **ಆಕಾಶದಲ್ಲಿ ಒಂದು ಸೂಚಕ ಕಾರ್ಯವನ್ನು ತೋರಿಸಿಕೊಂಡಬೇಕೆಂದು** ಕೇಳಿದರು. ಈ ಕೋರಿಕೆಯನ್ನು ಅನೇಕ ಸಂದರ್ಭಗಳಲ್ಲಿ

ಮಾಡಿದ್ದಾರೆ (12:38-42; ಲೂಕ 11:16; ಯೋಹಾನ 2:18; 6:30). ಸಧ್ಯದಲ್ಲಿ ಸ್ವಲ್ಪ ಹಿಂದೆ ಆತನು ಸ್ವಸ್ಥಪಡಿಸುವದರ ಮೂಲಕ ಅದ್ಭುತಗಳನ್ನು ಮಾಡಿದ್ದನು ಅವು ಪರಲೋಕದ ಅಧಿಕೃತ ಸೂಚನೆಯಾಗಿದ್ದವು; ಆದರೆ ಆತನ ವೈರಿಗಳಿಗೆ ಇದಕ್ಕಿಂತ ಶ್ರೇಷ್ಟವಾದವುಗಳು ಬೇಕಾಗಿದ್ದವು. ಅವರಿಗೆ ಭೂಮಿಯು ನಡುಗುವಂತ ಏನಾದರೂ ಬೇಕಾಗಿತ್ತು, ಇತರರು ಸಹ ಕೇಳುವಂತ ಕೇವಲ ಸ್ವಸ್ಥತೆಯನ್ನಲ್ಲ.[2] ಈ ಜನರು ಯೇಸುವಿನ ಶಕ್ತಿಯನ್ನು ನಿರಾಕರಿಸಲಿಲ್ಲ, ಆದರೆ ಅವರು ಇದು ದೇವರಿಂದ ಬಂದದ್ದು ಎಂದು ಒಪ್ಪಿಕೊಳ್ಳಲಿಲ್ಲ. ಅವರು ಆತನನ್ನು ಸೈತಾನನ ಮಧ್ಯವರ್ತಿ ಎಂದು ಅಪಾದಿಸಿದರು (12:24).

"ಸೂಚಕ ಕಾರ್ಯ" ಎಂದರೆ ಅದ್ಭುತ ಅದರಿಂದಾಗುವ ಅದ್ಭುತದ ನಿಮಿತ್ತವಾಗಿ ವ್ಯಕ್ತಿಯ ಶ್ರೇಷ್ಠ ಬಲವನ್ನು; ಮತ್ತು ಆತನ ಅಧಿಕಾರವನ್ನು ದೃಡಪಡಿಸುತ್ತದೆ (ನೋಡಿರಿ 11:2-6; ಯೋಹಾನ 1:29-34; 20:30, 31). "ಪರಲೋಕದಿಂದ" ಎಂಬ ವಾಕ್ಯಭಾಗ "ದೇವರಿಂದ" ಎಂದು ನೇರವಾಗಿ ಹೇಳುವ ವಿಧಾನವಾಗಿರಬಹುದು. ಬಹುಶಃ ಅವರು ಯೇಸು ಮೆಸ್ಸೀಯನಾಗಿದ್ದಾನೆ ಎಂಬುದಕ್ಕೆ ದೇವರಿಂದ ವಾದವಿವಾದವಿಲ್ಲದ ಸಾಕ್ಷಿಯನ್ನು ಬಯಸುತ್ತಿರಬಹುದು. "ಪರಲೋಕದಿಂದ" ಅಂದರೆ "ಆಕಾಶದಲ್ಲಿ" ಬಹುಶಃ ಅವರು ಮೋಶೆಯ ಸಮಯದಲ್ಲಿ ಪರಲೋಕದಿಂದ ಬಂದ ಮನ್ನದಂತ ಏನನ್ನಾದರೂ ನೋಡಲು ಬಯಸಿರಬಹುದು (ವಿಮೋಚನಕಾಂಡ 16:1-36), ಯೆಹೋಶುವನ ಸಮಯದಲ್ಲಿ ಸೂರ್ಯನು ಸ್ತಬ್ಧನಾದದ್ದು (ಯೆಹೋಶುವ 10:12-14), ಅಥವಾ ಎಲಿಯಾನ ಜೀವತ ಕಾಲದಲ್ಲಿ ಪರಲೋಕದಿಂದ ಬೆಂಕಿ ಬಿದ್ದದ್ದು (1 ಅರಸುಗಳು 18:30-40).

## ಉತ್ತರ (16:2-4)

**2ಆತನು ಅವರಿಗೆ - ಸಂಜೇವೇಳೆಯಲ್ಲಿ ನೀವು - ಆಕಾಶವು ಕೆಂಪಾಗಿದೆ, ನಿರ್ಮಲದಿನ ಬರುವದು ಅನ್ನುತ್ತೀರಿ; ಬೆಳಿಗ್ಗೆ - 3ಆಕಾಶವು ಮೋಡಮುಚ್ಚಿಕೊಂಡು ಕೆಂಪಾಗಿದೆ, ಈ ಹೊತ್ತು ಗಾಳಿ ಮಳೆ ಅನ್ನುತ್ತೀರಿ ಅಲ್ಲವೇ. ಆಕಾಶದ ಸ್ಥಿತಿಯನ್ನು ನೋಡಿ ಇದು ಹೀಗೆ ಅದು ಹಾಗೆ ಅನ್ನುವದಕ್ಕೆ ಬಲ್ಲಿರಿ; ಆದರೆ ಈ ಕಾಲದ ಸೂಚನೆಗಳನ್ನು ತಿಳುಕೊಳ್ಳಲಾರಿರಿ. 4ವ್ಯಭಿಚಾರಿಣಿಯಂತಿರುವ ಈ ಕೆಟ್ಟ ಸಂತತಿಯು ಸೂಚಕಕಾರ್ಯವನ್ನು ನೋಡಬೇಕೆಂದು ಅಪೇಕ್ಷಿಸುತ್ತದೆ; ಆದರೆ ಯೋನನಲ್ಲಿ ಆದ ಸೂಚಕಕಾರ್ಯವೇ ಹೊರತು ಬೇರೆ ಯಾವುದೂ ಇದಕ್ಕೆ ಸಿಕ್ಕುವದಿಲ್ಲ ಎಂದು ಉತ್ತರಕೊಟ್ಟು ಅವರನ್ನು ಬಿಟ್ಟುಹೋದನು.**

**ವಚನಗಳು 2, 3.** ಯೇಸು ಫರಿಸಾಯರಿಗೆ ಮತ್ತು ಸದ್ದುಕಾಯರಿಗೆ ಅವರ ಆತ್ಮೀಕ ಆಳದ ಕೊರತೆಯನ್ನು ಬಹಿರಂಗಪಡಿಸುವಂತೆ ಉತ್ತರಿಸಿದನು:

> **ಸಂಜೇವೇಳೆಯಲ್ಲಿ ನೀವು - ಆಕಾಶವು ಕೆಂಪಾಗಿದೆ, ನಿರ್ಮಲ ದಿನ ಬರುವದು ಅನ್ನುತ್ತಿರಿ; ಬೆಳ್ಳಿಗೆ ಆಕಾಶವು ಮೋಡ ಮುಚ್ಚಿಕೊಂಡು ಕೆಂಪಾಗಿದೆ, ಈ ಹೊತ್ತು ಗಾಳಿ ಮಳೆ ಅನ್ನುತ್ತಿರಿ ಇಲ್ಲವೇ. ಆಕಾಶದ ಸ್ಥಿತಿಯನ್ನು ನೋಡಿ ಇದು ಹೀಗೆ ಅದು ಹಾಗೆ ಅನ್ನುವದಕ್ಕೆ ಬಲ್ಲಿರಿ; ಆದರೆ ಈ ಕಾಲದ ಸೂಚನೆಗಳನ್ನು ತಿಳಿಕೊಳ್ಳಲಾರಿರಿ.**

ಕೆಲವು ಪ್ರಾಚೀನ ಹಸ್ತಪ್ರತಿಗಳು ಈ ಶಬ್ದಗಳನ್ನು ಬಿಟ್ಟುಬಿಡುತ್ತವೆ,[3] ಆದರೆ ಇನ್ನೂ ಅನೇಕರು ಇವುಗಳನ್ನು ಸೇರಿಸಿಕೊಳ್ಳುತ್ತಾರೆ. ಇದು ಕೆಲವು ಪಂಡಿತರಿಗೆ ಅವು ನಂತರ ಸೇರ್ಪಡೆಯಾದವುಗಳು ಎಂದು ನಂಬಲು ಸಹಾಯಕವಾಗಿವೆ, ಇನ್ನಿತರರಿಗೆ ಅವುಗಳನ್ನು ಶಾಸ್ತ್ರೀಗಳು ಬೇರೆಬೇರೆ ವಾತಾವರಣದಲ್ಲಿ ಬರೆಯುವಾಗ ಬಿಟ್ಟುಬಿಟ್ಟಿದ್ದಾರೆ ಎಂದು ನಂಬಲು ಸಹಾಯಕವಾಗಿವೆ ಐಗುಪ್ತದಲ್ಲಿ ಒಂದೇ ರೀತಿಯ ವಾತಾವರಣ ಇರುವದಿಲ್ಲ.[4] ಸಾಕ್ಷಿಯ

ಪ್ರಮಾಣವು ಅಧಿಕೃತವಾದ ಪಠ್ಯದೆಡೆಗೆ ಇದೆ. ಯೇಸು ತನ್ನ ಪ್ರತಿಕ್ರಿಯೆಯಲ್ಲಿ ಯೆಹೂದಿ "ಪರಲೋಕ" (*ouranos*) ಎಂದು ಅನುವಾದಿಸಲ್ಪಟ್ಟ ಪದ ವಚನ 2ರಲ್ಲಿ "ಆಕಾಶ" ಎಂಬ ಪದ ಒಂದೇ ಆಗಿದೆ. ಆತನ ಉತ್ತರ ಪ್ರಾಚೀನ ಕಾಲದಲ್ಲಿ ಸಮುದ್ರ ಪ್ರಯಾಣ ಮಾಡುವವರು ಉಪಯೋಗಿಸುವ ಪದಗಳಿಂದ ಕೂಡಿದೆ, "ಬೆಳಿಗ್ಗೆ ಆಕಾಶ ಕೆಂಪಾಗಿರುವಾಗ, ನಾವೀಕನು ಎಚ್ಚರಿಕೆ ತೆಗೆದುಕೊಳ್ಳುತ್ತಾನೆ ರಾತ್ರಿಯಲ್ಲಿ ಆಕಾಶ ಕೆಂಪಾಗಿರುವಾಗ ನಾವೀಕನು ಸಂತೋಷಿಸುತ್ತಾನೆ."[5] ರಾತ್ರಿಯಲ್ಲಿ ಆಕಾಶ ಕೆಂಪಾಗಿರುವಾಗ, ಸಾಮಾನ್ಯವಾಗಿ ಮರುದಿನ ಉತ್ತಮ ವಾತವರಣ ವಿರುತ್ತದೆ, ಬೆಳಿಗ್ಗೆ ಆಕಾಶವು ಕೆಂಪಾಗಿದ್ದಲ್ಲಿ, ಅದು ಬಿರುಗಾಳಿ ಬರುವ ಸೂಚನೆಯನ್ನು ನೀಡುತ್ತದೆ. ಯೇಸು ಹೇಳುತ್ತಾನೆ, ಈ ನಾಯಕರು ವಾತಾವರಣದ ಸೂಚನೆಗಳನ್ನು ನಿರ್ಧರಿಸುವವರಾಗಿದ್ದಾರೆ,[6] ತಮ್ಮ ಮುಂದೆ ನೆರವೇರುತ್ತಿರುವ ಆತ್ಮೀಕ ಸೂಚನೆಗಳನ್ನು ಖಂಡಿತವಾಗಿ ಅವರು ನೋಡುತ್ತಿದ್ದಾರೆ.

"ಈ ಕಾಲದ ಸೂಚನೆಗಳು" ಎಂಬ ವಾಕ್ಯಭಾಗ ವ್ಯಕ್ತಿ ಮತ್ತು ಅವರ ಮದ್ಯದಲ್ಲಿ ನಡೆಯುತ್ತಿರುವ ಯೇಸುವಿನ ಚಟುವಟಿಕೆಗಳನ್ನು ಒಳಗೊಂಡಿದೆ. ಯೇಸುವಿನ ಈ ಅಸಾಮಾನ್ಯವಾದ ಉಪಸ್ಥಿತಿ ಪ್ರಸ್ತುತ ದಿನಗಳಲ್ಲಿ ಜನರು ಪಶ್ಚಾತ್ತಾಪ ಪಡಲು ಅಥವಾ ಆತನನ್ನು ತಿರಸ್ಕರಿಸಲು ಮತ್ತು ಬರಲಿಕ್ಕಿರುವ ನ್ಯಾಯತೀರ್ಪನ್ನು ಎದುರಿಸಲು ಒತ್ತಾಯಿಸಲ್ಪಡುತ್ತಾರೆ ಎಂಬುದನ್ನು ಸೂಚಿಸುತ್ತದೆ.[7]

**ವಚನ 4.** ಯೇಸು ಅವರ ಅಪನಂಬಿಕೆಗೆಯಿಂದಾಗಿ ನೊಂದುಕೊಂಡನು ಎಂಬುದರಲ್ಲಿ ಸಂದೇಹವಿಲ್ಲ (ಮಾರ್ಕ 8:12), **ವ್ಯಭಿಚಾರಣಿಯಂತಿರುವ ಈ ಕೆಟ್ಟ ಸಂತತಿಯು ಸೂಚಕ ಕಾರ್ಯವನ್ನು ನೋಡಬೇಕೆಂದು ಆಪೇಕ್ಷಿಸುತ್ತದೆ** ಎಂದು ಹೇಳುತ್ತಾನೆ. ಆತನು ಅವರನ್ನು ವರ್ಣಿಸಲು ಈ ಕಲ್ಪನೆಗಳನ್ನು ಹಳೆ ಒಡಂಬಡಿಕೆಯಿಂದ ತೆಗೆದುಕೊಳ್ಳುತ್ತಾನೆ. ಈ ಜನರು ಆತ್ಮೀಕವಾಗಿ ದೇವರಿಗೆ ಅಪನಂಬಿಗಸ್ತರಾಗಿದ್ದರು (ನೋಡಿರಿ ಧರ್ಮೋಪದೇಶಕಾಂಡ 32:5; ಯೆಶಾಯ 50:1; ಯೆರೆಮೀಯ 3:8; 13:27; 31:32; ಯೆಹೆಜ್ಕೆಲ 16:32-43; ಹೋಶೇಯ 2:1-20).

ಅತನು ಅವರಿಗೆ ಯೋನನಲ್ಲಿ ಆದ **ಸೂಚಕಕಾರ್ಯವೇ ಹೊರತು ಬೇರೆ ಯಾವುದು ಇದಕ್ಕೆ ಸಿಕ್ಕುವದಿಲ್ಲ** ಎಂದು ಕರ್ತನು ಹೇಳುತ್ತಾನೆ. ಆತನು ಇದೇ ಉದಾಹರಣೆಯನ್ನು ಇತರ ಶಾಸ್ತ್ರಿಗಳನ್ನು ಮತ್ತು ಫರಿಸಾಯರನ್ನು ಎದುರಿಸುವಾಗ ಉಪಯೋಗಿಸಿದ್ದನು. ಮೊದಲಿನ ಸಂದರ್ಭದಲ್ಲಿ, ಆತನು "ಯೋನನು ಹೇಗೆ ಮೂರು ದಿನ ರಾತ್ರಿ ಹಗಲು ದೊಡ್ಡ ಮೀನಿನ ಹೊಟ್ಟೆಯೊಳಗೆ ಇದ್ದನೋ, ಹಾಗೆಯೇ ಮನುಷ್ಯ ಕುಮಾರನು ಮೂರು ದಿನ ರಾತ್ರಿ ಹಗಲು ಭೂಗರ್ಭದೊಳಗೆ ಇರುವನು" ಎಂದು ಹೇಳಿದನು (12:40). "ಯೋನನ ಆದ ಸೂಚಕ ಕಾರ್ಯ" ಕ್ರಿಸ್ತನ ಪುನರುತ್ಥಾನದ ಪೂರ್ವಛಾಯೆಯಾಗಿದೆ (ನೋಡಿರಿ 12:39, 40ರ ಮೇಲಿನ ವ್ಯಾಖ್ಯಾನ). ಶ್ರೇಷ್ಠ ಅದ್ಭುತವು, ಅದು ಯೇಸುವನ್ನು ದೇವಕುಮಾರನೆಂದು ಸಿದ್ಧಾಂತ ಪಡಿಸಿತು (ರೋಮಾಪುರದವರಿಗೆ 1:4), ಅದು ಸಹ ಯೆಹೂದ್ಯರಿಂದ ತಿರಸ್ಕರಿಸಲ್ಪಟ್ಟಿತು. ಈ ಅಪ್ರಾಮಾಣಿಕ ಮನುಷ್ಯರು, ಆತನ ಸಮಾಧಿಯನ್ನು ಕಾಯುತ್ತಿದ್ದ ಕಾವಲುಗಾರರಿಗೆ ಲಂಚವನ್ನು ನೀಡಿ ಮುಚ್ಚಿ ಹಾಕಲು ಪ್ರಯತ್ನಿಸಿದರು (ಮತ್ತಾಯ 28:11-15).

ಯೇಸು ಪ್ರತಿಕ್ರಿಯೆ ನೀಡಿದ ಬಳಿಕ, **ಅವರನ್ನು ಬಿಟ್ಟು ಹೊರಟು ಹೋದನು.**

## ಪಾಠಗಳು

### ಆತ್ಮೀಕ ಕುರುಡುತನ (16:1-4)

ಈ ಸಂಕ್ಷಿಪ್ತ ಭಾಗದಲ್ಲಿ, ನಾವು ಆತ್ಮೀಕವಾದ ಕುರುಡುತನದಿಂದ ನರಳುತ್ತಿರುವವರ ನಾಲ್ಕು ಗುಣಲಕ್ಷಗಳನ್ನು ನೋಡುತ್ತೇವೆ: (1) ಯಾರು ಆತ್ಮೀಕವಾಗಿ ಕುರುಡರಾಗಿದ್ದಾರೋ

ಅವರು ಕತ್ತಲೆಯನ್ನು ಹುಡುಕುತ್ತಾರೆ, (2) ಅವರು ಬೆಳಕನ್ನು ಶಪಿಸುತ್ತಾರೆ, (3) ಅವರು ಇನ್ನೂ ಹೆಚ್ಚಿನ ಕತ್ತಲೆಯತ್ತ ನಡೆಯುತ್ತಾರೆ, ಮತ್ತು (4) ಅವರು ದೇವರಿಂದ ಬಿಟ್ಟವರಾಗಿರುತ್ತಾರೆ.

## ವೈಜ್ಞಾನಿಕವಾಗಿ, ಆದರೆ ಆತ್ಮೀಕವಾಗಿ ಅಲ್ಲ (16:2, 3)

ಫರಿಸಾಯರು ಮತ್ತು ಸದ್ದುಕಾಯರು ವಾತಾವರಣವನ್ನು ಊಹಿಸಿಕೊಳ್ಳುವವರಾಗಿದ್ದರು ಆದರೆ "ಕಾಲ ಸೂಚನೆಗಳನ್ನು" ಗ್ರಹಿಸಿಕೊಳ್ಳುವಲ್ಲಿ ಅಸಮರ್ಥರಾಗಿದ್ದರು ಎಂದು ಯೇಸು ಗದರಿಸುತ್ತಾನೆ. ಅವರು ಆತನ ಬೋಧನೆಗಳಿಗೆ ಮತ್ತು ಅದ್ಭುತಗಳಿಗೆ ಗೌರವವನ್ನು ನೀಡಲಿಲ್ಲ, ಅದಲ್ಲದೆ ಕ್ರಿಸ್ತನೆಂಬ ಆತನ ವ್ಯಕ್ತಿತ್ವಕ್ಕೆ ಅವಮಾನ ಮಾಡಿದರು. ಆತನು ಅವರನ್ನು ಖಂಡಿಸಿರುವಾಗ, ಆತನು ನಮ್ಮ ಸಂತತಿಯ ಕುರಿತಾಗಿ ಏನು ಹೇಳುತ್ತಾನೆ? ನಾವು ವಾತವರಣದ ಅಧ್ಯಯನದಲ್ಲಿ ನಾವು ತೀರ್ವ ಪ್ರಗತಿಯನ್ನು ಹೊಂದಿದ್ದೇವೆ (ಪ್ರಶ್ನಾತೀತವಾಗಿರುವ ಅನೇಕ ವೈಜ್ಞಾನಿಕ ಕ್ಷೇತ್ರಗಳಲ್ಲಿ) ಆದರೆ ಭೌತಿಕ ಲೋಕದ ಈ ಜ್ಞಾನವು ಆತ್ಮೀಕ ಜಾಗ್ರತೆಗೆ ಸಮವಲ್ಲ. ಅನೇಕರು ತಮ್ಮ ಸ್ವಂತ ಅನೈತಿಕತೆಯನ್ನು ತಿಳಿದಿದ್ದಾರೆ ಆದರೆ ಕ್ರಿಸ್ತನು ತಿರುಗಿ ಬರುವದನ್ನು ಮತ್ತು ನ್ಯಾಯಾಧೀಶನಾಗಿ ಬರುವದನ್ನು ಗಂಭೀರವಾಗಿ ಪರಿಗಣಿಸುವದಿಲ್ಲ.
David Stewart

---

ಟಿಪ್ಪಣಿಗಳು

[1]Douglas R. A. Hare, Matthew, *Interpretation* (Louisville: John Knox Press, 1993), 183. [2]Leon Morris, *The Gospel According to Matthew,* Pillar Commentary (Grand Rapids, Mich.: Wm. B. Eerdmans Publishing Co., 1992), 413. [3]ಮಾರ್ಕನ ಸುವಾರ್ತೆಯಲ್ಲಿ ಆ ಪದಗಳ ಕೊರತೆಯಿದೆ (ಮಾರ್ಕ 8:11, 12). [4]Bruce M. Metzger, *A Textual Commentary on the Greek New Testament,* 2d ed. (Stuttgart: German Bible Society, 1994), 33. [5]ಈ ಸಿದ್ಧಾಂತದ ಮೊದಲನೆಯ ದಾಖಲೆಗಳು Theophrastus *Concerning Weather Signs* 1.10 ರಲ್ಲಿದೆ. Theophrastus (c. 371–c. 287 B.C.) ಅರಿಸ್ಟಾಟಲನ ಉತ್ತರಾಧಿಕಾರಿಯಾಗಿದ್ದಾನೆ. [6]ಪೂರ್ವಿಕರು ಮೋಡಗಳ ನಮೂನೆಯನ್ನು ನೋಡಿ ಹವಾಮಾನವನ್ನು ಮುಂತಿಳಿಸುವರು. (*Pliny Natural History* 18.78; Virgil *Georgics* 1.438–60; Talmud *Yoma* 21b.) [7]David Hill, *The Gospel of Matthew*, *The New Century Bible Commentary* (Grand Rapids, Mich.: Wm. B. Eerdmans Publishing Co., 1972), 257.